

# ಮೈಸೂರು ಶೈಲಿಯ ಪದ್ಮಾ

■ ಚಿತ್ರ ಲೇಖನ:

**ರಮಾ ಎಸ್ ಅರಕಲಗೂಡು**

'ಇತ್ತ ರಾಮ–ಸೀತೆ–ಹನುಮಂತ, ಅತ್ತ ರಾಧೆಯೊಂದಿಗೆ ಕೊಳಲನೂದುವ ಕೃಷ್ಣ, ಇನ್ನೊಂದೆಡೆ ಯಶೋಧೆಯ ಮಡಿಲಲ್ಲಿ ಆಟವಾಡುವ ಕೃಷ್ಣ, ಎದುರಿಗೆ ದುರ್ಗಾದೇವಿ, ಬದಿಯಲ್ಲೇ ಶ್ರೀನಿವಾಸ ಕಲ್ಯಾಣ..'

–ಹೀಗೆ ಆ ಮನೆಯ ಪ್ರತಿ ಗೋಡೆಯ ಮೇಲೂ ಬಂಗಾರ ಬಣ್ಣ ಲೇಪಿತ ಬಗೆಬಗೆಯ ಆಕರ್ಷಕ ಮೈಸೂರು ಶೈಲಿಯ ಚಿತ್ರಗಳು. ಒಟ್ಟಾರೆ ಅದೊಂದು ಪುಟ್ಟ ಕಲಾ ಗ್ಯಾಲರಿ.

–ಇದು ಬೆಂಗಳೂರಿನ ಮಲ್ಲೇಶ್ವರದಲ್ಲಿರುವ ಚಿತ್ರ ಕಲಾವಿದೆ ಪದ್ಮಾ ಹುಬ್ಳೀಕರ್ ಅವರ ಮನೆ. ಒಂದೂವರೆ ದಶಕಗಳ ಪರಿಶ್ರಮದಿಂದ ಇಂಥ ನೂರಾರು ಚಿತ್ರಗಳನ್ನು ರಚಿಸಿದ್ದಾರೆ. ಪದ್ಮಾ ಅವರ ಪ್ರತಿ ಚಿತ್ರದಲ್ಲೂ ವಿಶೇಷ ಆಕರ್ಷಣೆಯಿದೆ. ನೋಡುಗರ ಮನಸ್ಸಿಗೆ ಮುದ ಕೊಡುತ್ತವೆ.

**ಬಾಲ್ಯದ ಬಳುವಳಿ**

ಪದ್ಮಾ ಮೂಲತಃ ಮೈಸೂರಿನವರು. ಓದಿದ್ದು, ಬೆಳೆದಿದ್ದು ಮೈಸೂರಿನಲ್ಲೇ. ತಂದೆ ಸರ್ಕಾರದ ಉನ್ನತ ಹುದ್ದೆಯಲ್ಲಿದ್ದರು. ತಾಯಿ ಕರಕುಶಲ ಕೆಲಸ ಮತ್ತು ಕಸೂತಿ ಕೆಲಸಗಳಲ್ಲಿ ನಿಪುಣತೆ ಪಡೆದವರು. ಅದರ ಸಲುವಾಗಿ ಮೈಸೂರು ಮಹಾರಾಜರಿಂದ ಬಹುಮಾನಗಳನ್ನು ಪಡೆದಿದ್ದಾರೆ.

ಮನೆಯಲ್ಲಿ ಓದಿಗೆ ಬಹಳ ಪ್ರಾಮುಖ್ಯತೆ ಇತ್ತು. ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಪ್ರೋತ್ಸಾಹ ಸಿಗುತ್ತಿತ್ತು. ಪದ್ಮಾ ಅವರಿಗೆ ಬಾಲ್ಯದಿಂದಲೂ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ, ಜೊತೆಗೆ ಹಿಂದಿ ಭಾಷೆಯ ಬಗ್ಗೆ ಅಭಿಮಾನವಿತ್ತು. ತಮ್ಮ ಶಾಲಾ ಕಾಲೇಜು ದಿನಗಳಲ್ಲಿ ಅನೇಕ ಚಿತ್ರಗಳನ್ನು ಬರೆದಿದ್ದಾರೆ. ಹಾಗೆಯೇ ಹಲವಾರು ಪಾರಿತೋಷಕಗಳನ್ನು ಪಡೆದಿದ್ದಾರೆ.

ಕಲಾ ವಿಭಾಗದಲ್ಲಿ ಪದವಿ ಗಳಿಸಿದ ನಂತರ ಪದ್ಮಾ ಅವರು ಸಂಪೂರ್ಣವಾಗಿ ಚಿತ್ರಕಲೆಗೆ ತೊಡಗಿಸಿಕೊಳ್ಳಲು ತೀರ್ಮಾನಿಸಿದರು. ಕುಟುಂಬ ಸದಸ್ಯರೆಲ್ಲರ ಪ್ರೋತ್ಸಾಹದಿಂದ ಮೈಸೂರಿನ ಚಾಮರಾಜೇಂದ್ರ ಟೆಕ್ನಿಕಲ್ ಕಾಲೇಜ್‌ನಲ್ಲಿ ಐದು ವರ್ಷದ ಚಿತ್ರಕಲಾ ಡಿಪ್ಲೊಮಾ ತರಬೇತಿಗೆ ಸೇರಿದರು. ಚಿತ್ರಕಲೆ ಜೊತೆಗೆ 'ಹಿಂದಿ ವಿಶಾರದ' ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣರಾದರು.

**ಉದ್ಯಾನ ನಗರಿಯತ್ತ**

ತರಬೇತಿಗೆ ಸೇರಿದ ಎರಡು ವರ್ಷ ಪೂರೈಸುವುದರೊಳಗೆ ಅದೃಷ್ಟ ಎನ್ನುವಂತೆ ಕಲೆಯನ್ನು ಪ್ರೋತ್ಸಾಹಿಸುವ ಪತಿಯನ್ನು ಪಡೆದರು. ಪದ್ಮಾ ಅವರ ಪತಿ ಹುಬ್ಳೀಕರ್‌ರವರು ಬೆಂಗಳೂರಿನ ಪ್ರಜಾವಾಣಿ ದಿನಪತ್ರಿಕೆಯಲ್ಲಿ ವ್ಯಂಗ್ಯಚಿತ್ರಕಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಡಿಪ್ಲೊಮಾ ಯಶಸ್ವಿಯಾಗಿ ಮುಗಿಸಿದರು.

ವೈವಾಹಿಕ ಜೀವನದ ಜೊತೆ ಜೊತೆಗೆ ತಮ್ಮಲ್ಲಿದ್ದ ಕಲೆಯನ್ನು ಅಭಿವ್ಯಕ್ತಿಪಡಿಸುತ್ತಾ ಹೋದರು. ಆದರೆ, ಮನೆ, ಮಕ್ಕಳು ಸಂಸಾರದ ಜಂಜಾಟದಲ್ಲಿ ಹಲವು ವರ್ಷಗಳು ಅವರನ್ನು ಚಿತ್ರಕಲೆಯಿಂದ ದೂರವಿಟ್ಟಿತು. ಮಕ್ಕಳು ದೊಡ್ಡವರಾದ ಮೇಲೆ ಪುನಃ ಚಿತ್ರ ಬರೆಯಲು ಪ್ರಾರಂಭಿಸಿದರು.

ಮೈಸೂರು ಸಾಂಪ್ರದಾಯಕ ಶೈಲಿ ಕಲೆಗೆ ಮರುಜೀವ ಕೊಡಲು ಕರ್ನಾಟಕ ಸರ್ಕಾರವು ಆಸಕ್ತರಿಗೆ ತರಬೇತಿ ಕೊಡಲು ನಿರ್ಧರಿಸಿತು. ಮೊದಲಿನಿಂದಲೂ ಚಿತ್ರಕಲಾ ಪರಿಷತ್‌ನೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಹುಬ್ಳೀಕರ್‌ರವರು ಪತ್ನಿಯನ್ನು ತರಬೇತಿಗೆ ಸೇರಿಸಿದರು. ಚಿತ್ರಕಲೆಯನ್ನು ಉಸಿರು ಎಂದುಕೊಂಡ ಅವರು

(8ನೇ ಪುಟ ನೋಡಿ)